## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

## ಮಲ್ಲೇಶ್ವರಂ, ಬೆಂಗಳೂರು – ೩

## ೨೦೨೪-೨೫ ನೆಯ ಸಾಲಿನ ಪ್ರಶ್ನೆ ಪತ್ರಿಕೆಯ ಉತ್ತರ ಪತ್ರಿಕೆ

**ವಿಷಯ : ಪ್ರಥಮ ಭಾಷೆ ಕನ್ನಡ [ ಶಾಲಾ ಅಭ್ಯರ್ಥಿಗಳಿಗೆ ] ವಿಷಯ ಸಂಕೇತ : ೦೧ ಕೆ**

**ಸಮಯ : ೩.೧೫ ಗಂಟೆಗಳು ದಿನಾಂಕ : ೨೧/೦೩/೨೦೨೫ ಗರಿಷ್ಠ ಅಂಕಗಳು : ೧೦೦**

---

**೧) ವ್ಯಾಕರಣದ ಬಹು ಆಯ್ಕೆಯ ಪ್ರಶ್ನೆಗಳು.**

೧) ಸಿ) ಯೋಗವಾಹ

೨) ಡಿ) ಸಪ್ತಮೀ

೩) ಡಿ) ಕ್ರಿಯಾ ಸಮಾಸ

೪) ಬಿ) ಪ್ರಶ್ನಾರ್ಥಕ ಚಿಹ್ನೆ

೫) ಡಿ) ಸನ್ಮಾನ

೬) ಎ) ತದ್ಧಿತಾಂತ ಭಾವನಾಮ

**೨) ಮೂರನೆಯ ಪದದ ಸಂಬಂಧ ಪದಗಳು.**

೭) ತವಸಿ

೮) ಪ್ರಶ್ನಾರ್ಥಕ ಸರ್ವನಾಮ

೯) ಅನುಕರಣಾವ್ಯಯ

೧೦) ಕಳುಹಿಸಿದ್ದಾರೆ

**೩) ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು.**

೧೧) ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ.

೧೨) ಶಿವಾನುಭವ ಶಬ್ದಕೋಶ ಕೃತಿ ಬರೆದವರು ಫ.ಗು.ಹಳಕಟ್ಟಿ.

೧೩) ಶಬರಿ ರಾಮಲಕ್ಷ್ಮಣರಿಗಾಗಿ ಹೂವು, ಹಣ್ಣು-ಹಂಪಲ, ತಳಿರು ಮತ್ತು ಮಧುಪರ್ಕ ಸಂಗ್ರಹಿಸಿದ್ದಳು.

೧೪) ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಗಳಿಗೆ ಸಲುಗೆ ಕೊಟ್ಟರೆ ಇವರು ಹಿಂದಿನಂತೆ ದರ್ಪದಿಂದ ಕೆಡುವರು ಎಂದು ತಿಳಿದು ಕಾಶ್ಯಪಿಯೆಂಬ ತಂಗಿಯೂ ನನಗಿಲ್ಲ ಎಂದು ಹೇಳಿದನು.

೧೫) ದುರ್ಯೋಧನನು ಪಾರ್ಥ(ಅರ್ಜುನ) ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ಹೇಳಿದನು.

೧೬) ಮುನಿಸುತರು ಲವನು ವೀರನಾದ ರಾಮನ ಕುದುರೆಯನ್ನು ಕಟ್ಟಿದ್ದನ್ನು ಕಂಡು ಹೆದರಿದರು.

೧೭) ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ.

ಶ್ರೀ ಎಸ್.ಕೆ.ಶಿರಶ್ಯಾಡ ಕನ್ನಡ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ ಆಳೂರ

**೪) ಮೂರು - ನಾಲ್ಕು ವಾಕ್ಯದಲ್ಲಿ ಉತ್ತರಿಸುವುದು.**

೧೮) ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದವುಗಳನ್ನು ಆ ಭಾಷೆಯ ಮುಖಾಂತರವೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಂಗ್ಲ ಭಾಷೆ ಬೆಳೆದು ವಿಶ್ವವ್ಯಾಪಿಯಾಯಿತು.

೧೯) ಶಾನುಭೋಗರು ಒಂದು ಬಾರಿ ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿ, ಖಜಾನೆಗೆ ಹಣಕಟ್ಟಿ, ಅಲ್ಲಿಯ ಸ್ನೇಹಿತರನ್ನು ಕಂಡು, ಅಲ್ಲಿಂದ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಬರಬೇಕು. ಆಗ ಅವರ ಮನದಲ್ಲಿ ಕಾಡುದಾರಿ, ಆದರೂ ಬೆಳದಿಂಗಳಿನ ದಿನ, ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದುಕೊಂಡು ಯೋಚಿಸುತ್ತಾ ಬೇಗಬೇಗ ಹೆಜ್ಜೆಹಾಕಿ ನಡೆಯತೊಡಗಿದರು.

೨೦) ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನಿರುವ ಕೇವಲ ತಿಳುವಳಿಕೆ, ಜ್ಞಾನ ಮಾತ್ರ ಅಲ್ಲ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ. ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

೨೧) ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಂಡಳು. ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ, ನಿಮಗೆಂದು ತಂದಿದ್ದೇನೆ ಎಂದು ಹೇಳುತ್ತಾ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

೨೨) ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೀಗೆ ಹೋಲಿಸಿದ್ದಾರೆ. ನೀಲ-ಮೇಘ ಮಂಡಲ ಸಮಬಣ್ಣ ಎಂದು ಹೇಳಿ ಕಾಲದ ದೈತ್ಯತೆಯನ್ನು ಸಂಕೇತಿಸುವ ಕವಿ ಮುಗಿಲಿಗೆ ರೆಕ್ಕೆಗಳು ಮೂಡಿ ಇಡೀ ಆಕಾಶವೇ ಹಾರಿದಂತೆ ಆಗುತ್ತದೆ ಎನ್ನುತ್ತಾರೆ. ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ- ಚಂದ್ರರನ್ನು ಕಣ್ಣು ಮಾಡಿಕೊಂಡು ಹಕ್ಕಿಯು ಹಾರುತ್ತಿರುವ ನೋಟ ಅದ್ಭುತವಾದದ್ದು ಎಂದು ಕವಿ ಬೇಂದ್ರೆಯವರು ವರ್ಣಿಸಿದ್ದಾರೆ.

೨೩) ಭೀಷ್ಮಾಚಾರ್ಯರು ದುರ್ಯೋಧನನಿಗೆ ಪಾಂಡವರೊಡನೆ ಸಂಧಿ ಮಾಡಿಕೋ ಎಂದು ಸಲಹೆ ನೀಡುತ್ತಾನೆ. ಅದಕ್ಕೆ ದುರ್ಯೋಧನನು ಒಪ್ಪುವುದಿಲ್ಲ. ಅವನು ನಾನು ಭೂಮಿಗಾಗಿ ಹೋರಾಡುತ್ತಿಲ್ಲ, ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಬಿದ್ದ ಭೂಮಿಗೆ ಸಮಾನವಾದುದು. ಆದ್ದರಿಂದ ಗೆಳೆಯನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಸಹಬಾಳ್ವೆ ಮಾಡುವುದಿಲ್ಲ ಎನ್ನುತ್ತಾನೆ.

೨೪) ಪುಟ್ಟಿಯ ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಮೈ ತುಂಬಿ ನಿಂತಿವೆ. ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳಿವೆ. ಮನಸ್ಸು ತುಂಬಿ ಹಾಡುವ ಕೋಗಿಲೆಗಳಿವೆ. ಕಡಲು ಉಕ್ಕಿ ಹರಿಯುವ ಸಂಭ್ರಮ ಭೂಮಿಗಿದೆ.

೨೫) ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿದರೆ ಅವರು ವಿಷಯ ಗ್ರಹಣ ಮಾಡಿಕೊಳ್ಳಬಲ್ಲರು. ಆದರೆ ಅವರಿಗೆ ಸಂಸ್ಕೃತಿಯ ಅವಶ್ಯಕತೆ ಇದೆ. ಅವರಿಗೆ ಅದನ್ನು ಕೊಡುವ ತನಕ ಅವರ ಪ್ರಗತಿ ಸ್ಥಿರವಾಗಲಾರದು. ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಕೇವಲ ಜ್ಞಾನ ರಾಶಿಗೆ ಅದನ್ನು ಎದುರಿಸುವ ಶಕ್ತಿ ಇಲ್ಲ. ಜಗತ್ತಿಗೆ ಜ್ಞಾನ ರಾಶಿಯನ್ನೇ ಕೊಡಬಹುದು. ಆದರೆ ಅದರಿಂದ ಹೆಚ್ಚು ಪ್ರಯೋಜನವಿಲ್ಲ. ಸಂಸ್ಕೃತಿಯು ರಕ್ತದಲ್ಲಿ ಹರಿಯಬೇಕು. ಸಂಸ್ಕೃತಿಯನ್ನು ಹೊಂದಿರುವ ಜನರಿಂದ ದೇಶದ ಪ್ರಗತಿ ಸಾಧ್ಯ.

೨೬) ಮೊಸರು ಹಲವು ಪ್ರಕ್ರಿಯೆಗಳನ್ನು ದಾಟಿ ತುಪ್ಪವಾಗಿ ಪರಿವರ್ತನೆಯಾಗುವಂತೆ ಶರಣಸಂಗವೆಂಬ ಪ್ರಕ್ರಿಯೆಯಿಂದ ಮನುಷ್ಯ ತನ್ನೆಲ್ಲ ನ್ಯೂನತೆಗಳನ್ನು, ಬದುಕಿನ ಅಸಾಂಗತ್ಯಗಳನ್ನು ಭವಬಂಧನಗಳನ್ನು ಕಳೆದುಕೊಂಡು ಸಜ್ಜನನಾಗಿ, ಸದ್ಭಕ್ತನಾಗಿ ಪರಿವರ್ತಿತಗೊಂಡು ಮುಕ್ತನಾಗುತ್ತಾನೆ.

೨೭) ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಲೇಖಕರು ರವೀಂದ್ರನಾಥ ಠಾಕೂರರ ಆಯೀ ಭುವನ ಮನೋಮೋಹಿನಿ ಎಂದು ಮೊದಲಾಗುವ ಭಾರತ ಲಕ್ಷ್ಮೀ ಎಂಬ ಬಂಗಾಳಿ ಗೀತವನ್ನು ಕನ್ನಡಿಸಿದರು. ರವೀಂದ್ರನಾಥ ಠಾಕೂರರ ಶಿಶು ಎಂಬ

ಗ್ರಂಥದಲ್ಲಿಯ ವಿದಾಯ ಎಂಬ ಕವಿತೆಯನ್ನು ಶೇಕ್ ಮಹಮ್ಮದ್ ಇಕ್ಬಾಲರ ಹಿಂದೂಸ್ತಾನ ಹಮಾರಾ ಎಂಬ ಉರ್ದು ಗೀತವನ್ನೂ ಕನ್ನಡಿಸಿದರು.

**೫) ಕವಿ / ಸಾಹಿತಿಗಳ ಪರಿಚಯಗಳು.**

**೨೮) ಎಂ.ಮರಿಯಪ್ಪಭಟ್ಟ.**

**ಎಂ.ಮರಿಯಪ್ಪ ಭಟ್ಟರು** ಸಾ.ಶ. ೧೯೦೬ ರಲ್ಲಿ **ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ಕಬಕ** ಗ್ರಾಮದಲ್ಲಿ ಜನಿಸಿದರು. ಬಹುಭಾಷಾ ವಿದ್ವಾಂಸರಾದ ಅವರು ದ್ರಾವಿಡ ಭಾಷೆಗಳನ್ನು ತುಲನಾತ್ಮಕ ಅಧ್ಯಯನ ಮಾಡುವುದರೊಂದಿಗೆ ನಿಘಂಟು ರಚನೆಯಲ್ಲಿ ಅನುಪಮ ಸೇವೆಗೈದವರು. ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದುಡಿದವರು. **ತುಳು-ಇಂಗ್ಲಿಷ್ ನಿಘಂಟು, ಅಭಿನವಮಂಗರಾಜನ ನಿಘಂಟು, ಜಾತಕತಿಲಕಂ, ಛಂದಸ್ಸಾರ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ **ಕರ್ನಾಟಕ ಸರ್ಕಾರದ ಪುರಸ್ಕಾರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು** ಸಂದಿವೆ.

**೨೯) ಕುಮಾರವ್ಯಾಸ.**

**ಕುಮಾರವ್ಯಾಸನೆಂದೇ** ಪ್ರಸಿದ್ಧನಾಗಿರುವ **ಗದುಗಿನ ನಾರಾಣಪ್ಪನು ಗದಗ ಪ್ರಾಂತದ ಕೋಳಿವಾಡದವನು.** ಇವನ ಕಾಲ ಕ್ರಿ.ಶ. ೧೪೩೦. ಆದಿಕವಿ ಪಂಪನ ನಂತರ 'ವ್ಯಾಸರ' ಮಹಾಭಾರತವನ್ನು ಕನ್ನಡದಲ್ಲಿ ಮೊದಲ ಹತ್ತು ಪರ್ವಗಳನ್ನು ರಚಿಸಿದ್ದಾನೆ. **ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ** ಭಾರತ ಎಂಬ ಹೆಸರನ್ನು ಹೊಂದಿರುವ '**ಕರ್ಣಾಟ ಭಾರತ ಕಥಾಮಂಜರಿ**' ಎಂಬ ಕಾವ್ಯವನ್ನು ಬರೆದಿದ್ದಾನೆ. ಹಾಗೂ '**ಐರಾವತ**' ಎಂಬ ಕೃತಿಯನ್ನು ರಚಿಸಿದ್ದಾನೆಂದು ತಿಳಿದುಬಂದಿದೆ. ತನ್ನ ಕಾವ್ಯದಲ್ಲಿ ರೂಪಕಾಲಂಕಾರವನ್ನು ನಿರರ್ಗಳವಾಗಿ ಪ್ರಯೋಗಿಸಿ '**ರೂಪಕಸಾಮ್ರಾಜ್ಯ ಚಕ್ರವರ್ತಿ**' ಎಂಬ ಬಿರುದನ್ನು ಪಡೆದಿದ್ದಾನೆ.

**೬) ಛಂದಸ್ಸು.**

೩೦) ನ ಜ ಭ ಜ ಜ ಜ ರ

UUU U-U -UU U - U U – U U – U - U -

**ತಳವೆ / ಳಗಾಗಿ / ಕಟ್ಟಿಸ / ದೆ ಮಾಣ್ದೊ / ಡೆ ಕೆಮ್ಮ / ನೆ ಮೀಸೆ / ಪೊತ್ತೆನೇ**

**ಛಂದಸ್ಸು : ಚಂಪಕಮಾಲಾವೃತ್ತ**

**೭) ಅಲಂಕಾರ ಸಮನ್ವಯ.**

**೩೧) ಮಾರಿಗೌತಣವಾಯ್ತು ನಾಳಿನ ಭಾರತವು.**

**ಲಕ್ಷಣ** : ಅತಿ ಸಾಮ್ಯದಿಂದಾಗಿ ಉಪಮೇಯ – ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ ಅದು ರೂಪಕಾಲಂಕಾರವೆನಿಸುತ್ತದೆ.

**ಅಲಂಕಾರ : ರೂಪಕಾಲಂಕಾರ**

**ಉಪಮೇಯ : ನಾಳಿನ ಮಹಾಭಾರತ ಯುದ್ಧ**

**ಉಪಮಾನ : ಮಾರಿಯ ಔತಣ**

**ಸಮನ್ವಯ :** ಉಪಮೇಯವಾದ ನಾಳಿನ ಮಹಾಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕಾಲಂಕಾರವೆನಿಸುತ್ತದೆ.

## ೮) ಗಾದೆಮಾತು ವಿವರಣೆ.

### ೩೨) ಆಳಾಗಬಲ್ಲವನು ; ಅರಸಾಗಬಲ್ಲನು.

ಗಾದೆ ವೇದಗಳಿಗೆ ಸಮಾನ. ಅವು ನಿಜ ಜೀವನದ ಅನುಭವಕ್ಕೆ ಕೈಗನ್ನಡಿಯಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಮಾತುಗಳು ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತಿವೆ.

ನಾವು ಮಾಡುವ ಕೆಲಸ ಸಣ್ಣದಾಗಿರಲಿ ದೊಡ್ಡದಾಗಿರಲಿ ನಿಷ್ಠೆಯಿಂದ ಕಾರ್ಯ ಮಾಡಿದಾಗ ಯಶಸ್ಸು ಸಾಧಿಸಲು ಸಾಧ್ಯ. ಕಾಯಕದ ಘನತೆಯನ್ನು ಬಡವರು ಶ್ರೀಮಂತರು ಎನ್ನದೆ ತಿಳಿದುಕೊಳ್ಳಬೇಕು. ಯಾವನು ನಿಷ್ಠೆಯಿಂದ ದುಡಿದು ತಾನು ಮಾಡುವ ಕಾರ್ಯ ಶ್ರೇಷ್ಠವಾದುದು ಎಂದು ದುಡಿಯುತ್ತಾನೋ ಅವನು ಮುಂದೆ ಅರಸನ ಹಾಗೆ ಕುಳಿತು ಸಂತೋಷಪಡಲು ಸಾಧ್ಯವಾಗುತ್ತದೆ. ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಮಾತು ಅರಿತು ದುಡಿಯಬೇಕು. ಉದಾ : ವಿಜಯ ಸಂಕೇಶ್ವರ ಕೇವಲ ಒಂದು ವಾಹನದ ಚಾಲಕನಾಗಿದ್ದವನು ಕಷ್ಟಪಟ್ಟು ಕಾರ್ಯ ಮಾಡಿದ್ದರಿಂದ ಇವತ್ತು ಸಾವಿರಾರು ವಾಹನಗಳ ಮಾಲಿಕರಾಗಿದ್ದಾರೆ. ನಾನು ಸಣ್ಣ ಸಣ್ಣ ಕೆಲಸ ಮಾಡಿದರೆ ಘನತೆ ಕಡಿಮೆ ಆಗುತ್ತದೆ ಎಂದು ತಿಳಿದುಕೊಳ್ಳಬಾರದು. ತಾನು ಮಾಡುವ ಕಾರ್ಯದಲ್ಲಿ ಸ್ವರ್ಗ ಸುಖವನ್ನು ಅನುಭವಿಸುವ ಗುಣ ಹೊಂದಿರಬೇಕು. ಆದ್ದರಿಂದ ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಅನೇಕ ಉದಾಹರಣೆಗಳಿವೆ. ಆಳಿನ ಜೊತೆಗೂಡಿ ದುಡಿದಾಗ ಮಾತ್ರ ಸಮಸ್ಯಗಳನ್ನು ತಿಳಿದುಕೊಂಡು ಪರಿಹರಿಸಲು ಸಾಧ್ಯ. ಆವಾಗ ಆಳಿನ ಒಡೆಯನಾಗಲು ಸಾಧ್ಯ.

ಆದ್ದರಿಂದ ಕಷ್ಟಪಟ್ಟು ದುಡಿದರೆ ಇಷ್ಟಪಟ್ಟ ಸಾಧನೆಯ ಕೀರ್ತಿ ಸಿಗುತ್ತದೆ ಎಂಬುದುನ್ನು ಈ ಗಾದೆ ತಿಳಿಸಿಕೊಡುತ್ತದೆ.

## ೯) ಸಂದರ್ಭ - ಸ್ವಾರಸ್ಯ.

### ೩೩) "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು"

**ಆಯ್ಕೆ :** ಈ ಮೇಲಿನ ಹೇಳಿಕೆಯನ್ನು ಡಿ.ಎಸ್.ಜಯಪ್ಪಗೌಡ ಅವರು ಬರೆದ ದಿವಾನ್ ಸರ್ ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಎಂಬ ಕೃತಿಯಿಂದ ಆಯ್ದ ಭಾಗ್ಯಶಿಲ್ಪಿಗಳು ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :**

**ಸ್ವಾರಸ್ಯ :**

### ೩೪) "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"

**ಆಯ್ಕೆ :** ಪ್ರಸ್ತುತ ಹೇಳಿಕೆಯನ್ನು ವಿ.ಕೃ. ಗೋಕಾಕ್ ರು ಬರೆದ 'ಸಮುದ್ರದಾಚೆಯಿಂದ' ಎಂಬ ಪ್ರವಾಸಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಲಂಡನ್ ನಗರದ ಪ್ರವಾಸದ ಅನುಭವಗಳನ್ನು ಲೇಖಕರು ದಾಖಲಿಸುತ್ತ ತಮ್ಮ ಅನುಭವಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಬೇಕನ್ ಹೇಳಿದ ಮಾತನ್ನು ಸ್ಮರಿಸುತ್ತಾರೆ. ಕಡಿಮೆ ದಿನಗಳಲ್ಲಿ ಮನಸ್ಸು ವಿಕಾಸಗೊಂಡಿದೆ. ದೃಷ್ಟಿ ವಿಶಾಲವಾಗಿದೆ, ಸಂಸ್ಕೃತಿ ಐರಿಗಲ್ಲಿನ ಮೇಲೆ ನಿಂತಿದೆ ಎಂದು ನೆನಸುತ್ತಬೇಕನ್ ಹೇಳಿದ ಮಾತನ್ನು ನೆನಪಿಸಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ದೇಶ ಸುತ್ತು ಕೋಶ ಓದು ಎಂಬ ಗಾದೆಯನ್ನು ಇದು ಅರ್ಥೈಸುತ್ತದೆ. ದೇಶ-ವಿದೇಶಗಳ ಪ್ರವಾಸದ ಅನುಭವವು ಜ್ಞಾನಾಭಿವೃದ್ಧಿಗೆ ಸಹಕಾರಿ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

### ೩೫) "ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಳ್ತಯೊಳ್ ಬಂದಿರಪ್ಪೊಡೆ"

**ಆಯ್ಕೆ :** ಪ್ರಸ್ತುತ ಹೇಳಿಕೆಯನ್ನು 'ಶಿವಕೋಟ್ಯಾಚಾರ್ಯ' ವಿರಚಿತ 'ವಡ್ಡಾರಾಧನೆ' ಕೃತಿಯಿಂದ ಆಯ್ದ 'ಅಗ್ನಿಭೂತಿ ವಾಯುಭೂತಿಯರ ಕತೆ'ಯಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಸೂರ್ಯಮಿತ್ರನು ತಂಗಿ ಕಾಶ್ಯಪಿಯ ಪತ್ರ ಓದಿ ತಿಳಿದ ಮೇಲೆ ಅಗ್ನಿಭೂತಿ ವಾಯುಭೂತಿಯರಿಗೆ ಸಲುಗೆ ಕೊಟ್ಟೆನಾದರೆ ಮೊದಲಿನಂತೆ ಗರ್ವಿಷ್ಠರಾಗಿ ಹಾಳಾಗುವರೆಂದು ಮನದಲ್ಲಿ ಯೋಚಿಸಿ, ಹೀಗೆಂದನು. ನನಗೆ ಕಾಶ್ಯಪಿಯೆಂಬ ತಂಗಿಯೂ, ಸೋಮಶರ್ಮನೆಂಬ ಮೈದುನನೂ ಇಲ್ಲ. ನನಗೆ ಸೂರ್ಯಮಿತ್ರನೆಂಬ ಹೆಸರಿದೆ. ನಿಮ್ಮ ಮಾವನಾದ ಸೂರ್ಯಮಿತ್ರ ನಾನಲ್ಲ. ನೀವು ಯಾರಾದರೇನು? ವಿದ್ಯಾರ್ಥಿಗಳಾಗಿ ವಿದ್ಯೆ ಕಲಿಯುತ್ತೇವೆ ಎಂದು ಪ್ರೀತಿಯಿಂದ ಬಂದಿರುವುದಾದರೆ ಅಡ್ಡಿಯಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಇಲ್ಲಿ ಸೂರ್ಯಮಿತ್ರನ ಸಮಯಪ್ರಜ್ಞೆ, ಮುಂದಾಲೋಚನೆ ಬಹು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

### ೩೬) "ಸಾರ್ವಭೌಮರಾ ನೆತ್ತಿಯ ಕುಕ್ಕಿ"

**ಆಯ್ಕೆ** : ಪ್ರಸ್ತುತ ಹೇಳಿಕೆಯನ್ನು ದ.ರಾ.ಬೇಂದ್ರೆಯವರು ರಚಿಸಿರುವ 'ಗರಿ' ಎಂಬ ಕವನಸಂಕಲದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಕಾಲದ ಸುಳಿಯಲ್ಲಿ ಎಲ್ಲರೂ ಸಮಾನರು. ನಿಸರ್ಗದತ್ತವಾದ ಕಾಲಚಕ್ರದಲ್ಲಿ ಎಂತಹ ಪ್ರಭಾವಶಾಲಿಯಾದರೂ ತಲೆಬಾಗಲೇಬೇಕು. ಪ್ರತಿಯೊಂದು ಘಟನೆಯೂ ಕಾಲ ಉರುಳಿದಂತೆ ಇತಿಹಾಸವಾಗುತ್ತ ಹೋಗುತ್ತದೆ. ಬ್ರಿಟಿಷರ ಸಾಮ್ರಾಜ್ಯಶಾಹಿ ಆಡಳಿತ ಅನೇಕ ಕೋಟೆ-ಕೊತ್ತಲಗಳನ್ನು ತೇಲಿಸಿ, ಮುಳುಗಿಸುವಂತೆ ಮಾಡಿತು. ಎಂತಹ ಸಾರ್ವಭೌಮರನ್ನು ಸಹ ಕಾಲ ಬಿಡಲಿಲ್ಲ ಎಂಬುದನ್ನು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಕವಿ ಹೇಳಿದ್ದಾರೆ.

**ಸ್ವಾರಸ್ಯ** : ಚಲನಶೀಲವಾದ ಕಾಲಕ್ಕೆ ಎಲ್ಲರೂ ತಲೆಬಾಗಲೇಬೇಕು. ಕಾಲದ ಸುಳಿಯಲ್ಲಿ ಸಿಲುಕದೆ ಇರುವ ವ್ಯಕ್ತಿ ಯಾರೊಬ್ಬರೂ ಇಲ್ಲ ಎಂಬುದು ಬಹು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

### ೩೭) "ಗಿಳಿಯೆದೆ ಬಣ್ಣದ ನೋಟ"

**ಆಯ್ಕೆ** : ಈ ಮೇಲಿನ ಹೇಳಿಕೆಯನ್ನು 'ಕುವೆಂಪು'ರವರು ಬರೆದ 'ಪಕ್ಷಿಕಾಶಿ' ಎಂಬ ಕವನಸಂಕಲನದಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಅಶ್ವೀಜ ಮಾಸದಲ್ಲಿ ಭತ್ತದ ಗದ್ದೆಯ ಬಣ್ಣದ ವರ್ಣನೆ ಮಾಡುವ ಸಂದರ್ಭದಲ್ಲಿ ಕವಿಯು ಈ ಮೇಲಿನಂತೆ ಹೇಳಿದ್ದಾನೆ. ಮಲೆನಾಡಿನಲ್ಲಿ ಕಂಡು ಬರುವ ಭತ್ತದ ಗದ್ದೆಯು ಗಿಳಿಯ ಎದೆಯ ಬಣ್ಣದಿಂದ ಕಂಗೊಳಿಸುತ್ತಿದೆ. ಅದರ ಕೆಳಗಿನ ಒಂದು ವನ, ಆ ವನದ ಅಂಚಿನಲ್ಲಿ ಕೊನೆಬಿಟ್ಟ ಅಡಕೆಯ ತೋಟವೂ ಕಂಡುಬರುತ್ತದೆ ಎಂಬುದಾಗಿ ಕವಿಯು ಪ್ರಕೃತಿಯನ್ನು ವರ್ಣಿಸಿದ್ದಾರೆ.

**ಸ್ವಾರಸ್ಯ** : ಕುವೆಂಪುರವರಿಗೂ ಮತ್ತು ಹಸುರಿಗೂ ಒಂದು ಅವಿನಾಭಾವ ಸಂಬಂಧ ಇತ್ತು ಎಂಬುದು ಇಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

### ೩೮) "ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮನೊರ್ವನೇ ವೀರ"

**ಆಯ್ಕೆ** : ಈ ಮೇಲಿನ ಹೇಳಿಕೆಯನ್ನು 'ಲಕ್ಷ್ಮೀಶ' ಕವಿಯು ಬರೆದಿರುವ 'ಜೈಮಿನಿಭಾರತ' ಎಂಬ ಮಹಾಕಾವ್ಯದಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಶ್ರೀರಾಮನು ಬ್ರಹ್ಮಹತ್ಯಾದೋಷ ನಿವಾರಣೆಗಾಗಿ ಅಶ್ವಮೇಧ ಯಾಗವನ್ನು ಕೈಗೊಂಡು ಯಜ್ಞಾಶ್ವವನ್ನು ಬಿಡುತ್ತಾನೆ. ಅದು ದೇಶ ದೇಶಗಳನ್ನು ಸಂಚರಿಸುತ್ತ ವಾಲ್ಮೀಕಿಯ ಆಶ್ರಮವನ್ನು ಪ್ರವೇಶಿಸುತ್ತದೆ. ಆಗ ಉದ್ಯಾನವನದ ಕಾವಲಿಗೆ ಇದ್ದ ವೀರಲವನು ಅದನ್ನು ನೋಡಿ ಅದರ ಹತ್ತಿರ ಬರುತ್ತಾನೆ. ಆಗ ಅದರ ಹಣೆಯ ಪಟ್ಟಿಯಲ್ಲಿ ಬರೆದಿರುವ ಲೇಖನವನ್ನು ಓದುವ ಸಂದರ್ಭದಲ್ಲಿ ಈ ಮೇಲಿನ ವಾಕ್ಯ ಬರುತ್ತದೆ.

**ಸ್ವಾರಸ್ಯ** : ಇಲ್ಲಿ ರಾಮನ ಶೂರತನದ ಜೊತೆಗೆ ರಾಮನಲ್ಲಿ ಅಡಗಿರುವ ಅಹಂಕಾರದ ಗುಣವನ್ನೂ ಲವನು ಗುರುತಿಸುವುದು, ಹಾಗೂ ಅದಕ್ಕೆ ಪ್ರತಿಯಾಗಿ ಲವಕುಮಾರನ ದಿಟ್ಟ ನಿರ್ಧಾರವು ಇಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

ಶ್ರೀ ಎಸ್.ಕೆ.ಶಿರಶ್ಯಾಡ ಕನ್ನಡ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ ಆಲೂರ

೧೦) ಪದ್ಯ ಪೂರ್ಣಗೊಳಿಸುವುದು.

೩೯) ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ೞೆಂತೆನಗೆ ಕೆಳೆಯನೇ ನೂಂ
ಕಂತಪ್ಪನನಱಿಯೆನೆಂದು ಸಭೆಯೊಳ್ ನುಡಿದಂ

ಅಥವಾ

ಒಡವೆಯನರ್ದಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ
ದಡಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ
ಲ್ಲೊಡಮೆಸಮಂತು ಪೇೞಿವರೊಳಾವುದನೀವುದೊ ಕುಂಭಸಂಭವ

೧೧) ಪದ್ಯದ ಸಾರಾಂಶ.

೪೦) ಜಡಗ ಹೇಳತಾನ--------------------------------------------------------------------------------------------------------
---------------------------------------------------------------ಆದ ಸಾಹೇಬನ ಠಾರಾ.(೪ ಸಾಲು)

ಈ ಮೇಲಿನ ಪದ್ಯಭಾಗವನ್ನು ಡಾ॥ 'ಬಿ.ಎಸ್ ಗದ್ದಗಿಮಠ'ರವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದಾಯ್ದ 'ಹಲಗಲಿ ಬೇಡರು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಮೌಲ್ಯ :** ಅನಕ್ಷರಸ್ಥ ಸಮುದಾಯದಲ್ಲಿದ್ದ ಸ್ವಾತಂತ್ರ್ಯ ಪ್ರೇಮವನ್ನು ಪರಿಚಯಿಸುವುದಾಗಿದೆ.

**ಸಾರಾಂಶ :** ಜಡಗನು ಜನರಿಗೆ ಹೇಳುತ್ತಾನೆ, ಇವರನ್ನು ಹೊಡೆಯಿರಿ, ಇವರು ಸಂಪೂರ್ಣವಾಗಿ ಮೋಸಗಾರರು, ವಿಶ್ವಾಸಘಾತಕರು ಇವರ ಮೇಲೆ ನಂಬಿಗೆ ಇಲ್ಲ. ಒಳಸಂಚಿನಿಂದ ಇವರು ನಮಗೆ ಮೋಸವನ್ನು ಮಾಡಿ ನಮ್ಮ ದೇಶವನ್ನು ಗೆಲ್ಲುತ್ತಾರೆ. ಮುಂದೆ ನಮಗೆ ಆಪತ್ತು ಕಾದಿದೆ ಎಂದು ಗುಂಡು ಹೊಡೆಯುತ್ತಾನೆ. ಆಗ ಹೆಬಲಕ್ ಸಾಹೇಬನು ಮರಣ ಹೊಂದುತ್ತಾನೆ.

೧೨) ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು.

೪೧) ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

ಯುದ್ಧದ ವಿಮಾನವೊಂದು ಸ್ಫೋಟಗೊಂಡು ಸಮುದ್ರದಲ್ಲಿ ಬಿದ್ದಾಗ ಅದರಲ್ಲಿ ಉಳಿದಿದ್ದ ರಾಹಿಲನು ಈಜುತ್ತಾ ಸಮುದ್ರದ ತೀರಕ್ಕೆ ಸೇರಿಕೊಳ್ಳುತ್ತಾನೆ. ಆಗ ಅದು ವೈರಿ ಪ್ರದೇಶವಾಗಿದ್ದು ಅವನಿಗೆ ತಿಳಿಯಲಿಲ್ಲ. ಆದರೂ ಜೋರಾಗಿ ಬರುತ್ತಿರುವ ಮಳೆಯಿಂದ ರಕ್ಷಿಸಿಕೊಳ್ಳಲು, ಕಾಲಿನ ಆರೈಕೆ ಮಾಡಿಕೊಳ್ಳಲು ಆಶ್ರಯ ಬಯಸಿದಾಗ ಒಂದು ಮನೆ ಕಂಡುಬರುತ್ತದೆ. ಆ ಮನೆಗೆ ಕ್ಕಾಲೆಳೆಯುತ್ತಾ ಬಂದು ಬಾಗಿಲು ಬಡಿಯುತ್ತಾನೆ. ಆ ಮನೆಯ ಒಳಗಿಂದ ಮುದುಕಿಯು ಬಂದು ಬಾಗಿಲು ತೆರೆಯುತ್ತಾಳೆ.

ಆ ಮನೆಯ ಒಳಗೆ ಮುದುಕಿಯ ಸೊಸೆಯು ಹೆರಿಗೆ ಬೇನೆ ತಿನ್ನುತ್ತಿದ್ದಾಳೆ. ಆಕೆಯ ಆರ್ತನಾದ ಕೇಳಿದ ರಾಹಿಲನು ಮುದುಕಿಯನ್ನು ಕೇಳಿದಾಗ ಮುದುಕಿಯು ಸೊಸೆಯು ಹೆರಿಗೆ ಬೇನೆ ತಿನ್ನುತ್ತಿದ್ದಾಳೆ. ಡಾಕ್ಟರ್ ಅಥವಾ ಸೂಲಗಿತ್ತಿಯನ್ನಾದರೂ ಕರೆಯೋಣವೆಂದರೆ ಈ ಬಾಂಬು, ಬ್ಲಾಕ್‌ಔಟ್ ನಿಯಮ ಎಂದಳು. ಆಗ ರಾಹಿಲನು ನಾನು ಡಾಕ್ಟರ್ ನಾನು ಆಕೆಯನ್ನು ಪರೀಕ್ಷಿಸುವೆ ಬಿಸಿನೀರು ಸಿದ್ಧಪಡಿಸಿ ಎಂದಾಗ ಮುದುಕಿಯು ಬಿಸಿನೀರು ಸಿದ್ಧಪಡಿಸಿಕೊಂಡು ಬರುವಾಗ ರಾಹಿಲನು ಆಕೆಯನ್ನು ಪರೀಕ್ಷಿಸಿ ಹೆರಿಗೆ ಮಾಡಿಕೊಳ್ಳುತ್ತಾನೆ. ಆದರೆ ಮಗು ಬದುಕಿರಲಿಲ್ಲ.

ಶ್ರೀ ಎಸ್.ಕೆ.ಶಿರಶ್ಯಾಡ ಕನ್ನಡ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ ಆಲೂರ

ಅದೇ ರೀತಿಯಾಗಿ ಮುದುಕಿಯೂ ಸಹ ರಾಹಿಲನಿಗೆ ಸಹಾಯವನ್ನು ಮಾಡಿ ಮಹದುಪಕಾರ ಮಾಡುತ್ತಾಳೆ. ವೈರಿ ದೇಶದ ಸೈನಿಕರು ಮುದುಕಿಯ ಮನೆಗೆ ಗಾಯಗೊಂಡ ಸೈನಿಕನನ್ನು ಶೋಧಿಸಲು ಬಂದಾಗ ಮುದುಕಿಯು ರಾಹಿಲನನ್ನು ತನ್ನ ಸೊಸೆಯು ಮಲಗುವ ಕೋಣೆಯ ಮಂಚದ ಕೆಳಗೆ ಜಾಗವನ್ನು ತೋರಿಸಿ ಅಲ್ಲೇ ಇರಲು ತಿಳಿಸುತ್ತಾಳೆ. ಕೋಣೆಯ ಬಾಗಿಲಿನ ಒಳಗಡೆ ತನ್ನ ಮೊಮ್ಮಗನ ಶವವನ್ನು ಬಟ್ಟೆಯಲ್ಲಿ ಸುತ್ತಿ ಇಡುತ್ತಾಳೆ. ವೈರಿ ಸೈನಿಕರು ಕೋಣೆಯ ಶೋಧನೆಯನ್ನು ಮಾಡುವಾಗ ಆ ಮಗುವಿನ ಶವವನ್ನು ಹಾಗೂ ಆ ಕೋಣೆಯಿಂದ ಬರುವ ಹಸಿ ನೆತ್ತರದ ವಾಸನೆ ಮೂಗಿಗೆ ಬಡಿದಾಗ ಶೋಧನೆಯನ್ನು ಮಾಡದೇ ಹೊರಟು ಹೋಗುತ್ತಾರೆ.

ಈ ರೀತಿಯಾಗಿ ರಾಹಿಲನು ಮುದುಕಿಯ ಕುಟುಂಬಕ್ಕೂ , ಮುದುಕಿಯು ರಾಹಿಲನಿಗೂ ಪರಸ್ಪರ ಸಹಾಯವನ್ನು ಮಾಡುತ್ತಾರೆ.

**೪೨) ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ? ವಿವರಿಸಿ.**

ನಮ್ಮ ಸುತ್ತಲೂ ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಪ್ರೀತಿಯ ಹಣತೆಯನ್ನು ಹಚ್ಚೋಣ. ಬಿರುಗಾಳಿಗೆ ಹೊಯ್ದಾಡುತ್ತಿರುವ ಸಂಸಾರವೆಂಬ ಹಡಗನ್ನು ಎಚ್ಚರಿಕೆಯಿಂದ ಮುಂದೆ ನಡೆಸೋಣ. ನಮ್ಮ ಸುತ್ತಮುತ್ತಲಿನ ಪರಿಸರವು ನಿರಂತರವಾಗಿ ಕಲುಷಿತಗೊಳ್ಳುತ್ತಿದೆ. ಹೀಗೆ ಕಲುಷಿತಗೊಂಡಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗೋಣ. ಬರಡಾಗಿರುವ ಕಾಡುಮೇಡುಗಳಿಗೆ ವಸಂತವಾಗೋಣ. ಸಮಾಜದಲ್ಲಿ ಅನೇಕ ಜನರು ನಾನಾ ಕಾರಣಗಳಿಂದ ಭಯಭೀತರಾಗಿದ್ದಾರೆ, ದುಃಖಿತರಾಗಿದ್ದಾರೆ, ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಅವರಲ್ಲಿ ಹೊಸ ಭರವಸೆಗಳನ್ನು ತುಂಬೋಣ. ಧರ್ಮ, ಜಾತಿ, ಭಾಷೆ ಮುಂತಾದ ಕಾರಣಗಳಿಂದ ಮನುಜ-ಮನುಜರ ನಡುವೆ ಭೇದಭಾವಗಳು ನಿರ್ಮಾಣಗೊಂಡು ದ್ವೇಷ, ಅಸೂಯೆ ಮುಂತಾದವು ಮನೆಮಾಡಿವೆ. ಇವುಗಳನ್ನು ಪ್ರೀತಿ, ವಿಶ್ವಾಸ ಮುಂತಾದವುಗಳ ಮೂಲಕ ಹೋಗಲಾಡಿಸಿ ಮನುಷ್ಯರ ನಡುವೆ ಸಮಾನತೆಯ ಸೇತುವೆಯಾಗೋಣ. ಪ್ರತಿಯೊಂದು ಮತಗಳು ದಾರಿಯನ್ನು ತೋರಿಸುವ ದೀವಿಗೆಗಳು ಎಂಬುದನ್ನು ಅರಿತು ಎಚ್ಚರದಿಂದ ಬದುಕನ್ನು ಮುನ್ನಡೆಸೋಣ. ಭಯ-ಸಂಶಯಗಳಿಂದ ಕಂದಿದ ಕಣ್ಣುಗಳಿಗೆ ನಾಳಿನ ಕನಸುಗಳನ್ನು ಬಿತ್ತುವುದರ ಮೂಲಕ ಅವರಲ್ಲಿ ನವಚೈತನ್ಯವನ್ನು ತುಂಬೋಣ ಎಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ.

**೧೩) ಅಪಠಿತ ಗದ್ಯ.**

**೪೩)**

ಅ) ೧೨ ಮತ್ತು ೧೫ನೆಯ ಶತಮಾನಗಳಲ್ಲಿಯಂತೆ ೧೯ನೆಯ ಶತಮಾನದಲ್ಲೂ ಕನ್ನಡಕ್ಕೆ ಇಂತಹ ಕಷ್ಟಕಾಲವೇ ಮುಂದುವರೆಯಿತು. ಅನ್ಯ ಭಾಷೆಗಳು ಕನ್ನಡ ಭಾಷೆಯ ಕತ್ತನ್ನು ಹಿಸುಕುತ್ತಲಿದ್ದವು. ಓದು-ಬರೆಹ, ಮಾತುಕತೆಗಳಲ್ಲಿ ಕನ್ನಡವನ್ನು ಬಳಸುವುದು ಅಗೌರವವೆಂದು ಕನ್ನಡಿಗರೇ ಭಾವಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆ ಒಂದೂ ಇರಲಿಲ್ಲ. ಇದರಿಂದಾಗಿ ತನ್ನ ದೇಶದಲ್ಲಿಯೇ ಕನ್ನಡ ಭಾಷೆ ಪರದೇಶಿ ಮಗನಂತೆ ಬದುಕುತ್ತಲಿದ್ದಿತು.

ಬ) ಕನ್ನಡದ ಹುಲಿ ಎನಿಸಿಕೊಂಡಿರುವ ಡೆಪ್ಯೂಟಿ ಚೆನ್ನಬಸಪ್ಪನವರು ೧೮೬೬ರಲ್ಲಿ ಡೆಪ್ಯೂಟಿ ಎಜ್ಯುಕೇಶನಲ್ ಇನ್ ಸ್ಪೆಕ್ಟರ್ ಆಗಿ ಮರಣ ಪರ್ಯಂತ ಎಂದರೆ ೧೮೮೧ ರ ವರೆಗೆ ಆ ಹುದ್ದೆಯಲ್ಲಿಯೇ ನಿಂತು ಕನ್ನಡಕ್ಕೆ ಇನ್ನೂ ಘನವಾದ ಸೇವೆಯನ್ನು ಸಲ್ಲಿಸಿದರು. ಇವರು ಕನ್ನಡಕ್ಕೆ ಮನೆಗ ಮಗನ ಸ್ಥಾನವನ್ನು ಒದಗಿಸಿಕೊಟ್ಟರು.ಚೆನ್ನಬಸಪ್ಪನವರು ಹಳ್ಳಿ, ಪಟ್ಟಣ ಸಂಚರಿಸಿ ಕನ್ನಡವನ್ನೇ ಶಾಲೆಯಲ್ಲಿ ಕಲಿಸಲು ವ್ಯವಹಾರದಲ್ಲಿ ಬಳಸಲು ಸಾರ್ವಜನಿಕರಿಗೆ, ಶಿಕ್ಷಕರಿಗೆ ಪ್ರಾರ್ಥಿಸಿದರು, ಪ್ರೋತ್ಸಾಹಿಸಿದರು. ಅವರ ಪ್ರಯತ್ನದ ಫಲವಾಗಿ ೧೮೫೫ರಲ್ಲಿ ಬೆಳಗಾವಿ, ವಿಜಾಪುರ, ಧಾರವಾಡದಲ್ಲಿ ೧,೩,೯,೧೨ ಇದ್ದ ಕನ್ನಡ ಶಾಲೆ ೧೮೮೨ ರ ವೇಳೆಗೆ ೧೬೬, ೧೫೦, ೨೪೧ಕ್ಕೆ ಏರಿತು. ಕನ್ನಡ ಪಂಡಿತರಿಂದ ಒಳ್ಳೆಯ ಪಠ್ಯಪುಸ್ತಕಗಳನ್ನು ಬರೆಸಿದರು. ಶಿಕ್ಷಕರು ಕನ್ನಡದ ಬದಲಿಗೆ ಮರಾಠಿ ಪದಗಳನ್ನು ಬಳಸಿದರೆ ದಂಡ ವಿಧಿಸಿ ಕನ್ನಡ ಬಳಕೆಗೆ ಒತ್ತು ನೀಡಿದರು. ಇದರಿಂದ ಕನ್ನಡ ಯಜಮಾನನ ಸ್ಥಾನ ಪಡೆಯಿತು.

ಶ್ರೀ ಎಸ್.ಕೆ.ಶಿರಶ್ಯಾಡ ಕನ್ನಡ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ ಆಲೂರ

೧೪) ಪತ್ರ ಬರೆಹ.

೪೪) ನಿಮ್ಮನ್ನು ಮಧುಗಿರಿ ಸರಕಾರಿ ಪ್ರೌಢ ಶಾಲೆಯ ವೆಂಕಟೇಶ ಎಂದು ಭಾವಿಸಿಕೊಂಡು ಶಾಲೆಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ.

**ಮನವಿ ಪತ್ರ**

**ಇವರಿಂದ** ೨೧/೦೩/೨೦೨೫

ವೆಂಕಟೇಶ ಮಧುಗಿರಿ

ಸರಕಾರಿ ಪ್ರೌಢ ಶಾಲೆ ಮಧುಗಿರಿ

ಜಿ : ತುಮಕೂರು

**ಇವರಿಗೆ**

ಮಾನ್ಯ ಅಧ್ಯಕ್ಷರು

ಜಿಲ್ಲಾ ಪಂಚಾಯತಿ ಕಾರ್ಯಾಲಯ

ಮಧುಗಿರಿ

ಜಿ : ತುಮಕೂರು

**ಮಾನ್ಯರೇ,**

**ವಿಷಯ** : ಶಾಲೆಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡುವಂತೆ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾನು ವೆಂಕಟೇಶ ಆಗಿದ್ದು, ಸರಕಾರಿ ಪ್ರೌಢ ಶಾಲೆ ಮಧುಗಿರಿಯಲ್ಲಿ ೧೦ನೆಯ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ಹಲವು ವರ್ಷಗಳಿಂದ ನಮ್ಮ ಶಾಲೆಯಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲ. ಆದರಿಂದ ನಾವೆಲ್ಲ ನೀರಿಗಾಗಿ ಪರದಾಡುವ ಸ್ಥಿತಿ ಉಂಟಾಗಿದೆ. ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಹಲರಿಗೆ ಪತ್ರದ ಮೂಲಕ ವಿನಂತಿಸಿಕೊಂಡರೂ ನೀರಿನ ಸಮಸ್ಯೆ ಬಗೆಹರಿದಿಲ್ಲ. ಆದ್ದರಿಂದ ತಾವುಗಳ ನಮ್ಮ ಪ್ರೌಢ ಶಾಲೆಗೆ ಆದಷ್ಟು ಬೇಗ ಕೊಳವೆ ಬಾವಿ ಹಾಕಿಸಿ, ಕುಡಿಯಲು ನೀರನ್ನು ಒದಗಿಸಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಧನ್ಯವಾದಗಳೊಂದಿಗೆ**

**ಹೊರವಿಳಾಸ** **ಇಂತಿ ತಮ್ಮ ವಿಶ್ವಾಸಿ**

**ರವರಿಗೆ** ವೆಂಕಟೇಶ

ಮಾನ್ಯ ಅಧ್ಯಕ್ಷರು

ಜಿಲ್ಲಾ ಪಂಚಾಯತಿ ಕಾರ್ಯಾಲಯ **೫೦ ವಿದ್ಯಾರ್ಥಿಗಳ ಸಹಿ**

ಮಧುಗಿರಿ

ಜಿ : ತುಮಕೂರು

ಶ್ರೀ ಎಸ್.ಕೆ.ಶಿರಶ್ಯಾಡ ಕನ್ನಡ ಶಿಕ್ಷಕರು ಸರಕಾರಿ ಪ್ರೌಢ ಶಾಲೆ ಆಹೇರ

## ೧೫) ಪ್ರಬಂಧ ಬರಹ.

### ೪೫) ತ್ಯಾಜ್ಯ ವಸ್ತು ನಿರ್ವಹಣೆ.

**ಪೀಠಿಕೆ** : ತ್ಯಾಜ್ಯವಸ್ತು ನಿರ್ವಹಣೆ ಎಂದರೆ ತ್ಯಜಿಸಿದ ವಸ್ತು ಎಂದರ್ಥ. ಮಾನವ ಬಳಸಿ ಬಿಟ್ಟ ಅನುಪಯುಕ್ತ ವಸ್ತುಗಳು ತ್ಯಾಜ್ಯವಸ್ತುಗಳಲ್ಲಿ ಸೇರ್ಪಡೆಗೊಳ್ಳುತ್ತವೆ. ಇವುಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಅಥವಾ ಮರುಬಳಕೆ ಮಾಡುವುದನ್ನು ನಿರ್ವಹಣೆ ಎಂದು ಹೇಳಬಹುದು. ಈ ವಸ್ತುಗಳು ಕೆಲವೊಂದು ಬಾರಿ ಪರಿಸರವನ್ನು ಮಲಿನಗೊಳಿಸುವುದರೊಂದಿಗೆ ಎಲ್ಲ ಜೀವಿಗಳ ಅನಾರೋಗ್ಯಕ್ಕೂ ಕಾರಣವಾಗುತ್ತದೆ. ಆದ್ದರಿಂದ ಅವುಗಳ ಸರಿಯಾದ ನಿರ್ವಹಣೆ ಮಾಡುವುದು ಅತೀ ಅವಶ್ಯವಾಗಿದೆ.

**ವಿಷಯ ವಿವರಣೆ** : ಆರೋಗ್ಯಯುತವಾದ ವಾತಾವರಣಕ್ಕೆ ತ್ಯಾಜ್ಯವಸ್ತುಗಳ ನಿರ್ವಹಣೆಯು ಬಹು ಮುಖ್ಯವಾದ ಪಾತ್ರ ವಹಿಸುತ್ತದೆ. ಈ ವಸ್ತುಗಳಲ್ಲಿ ಕೆಲವೊಂದು ಮರುಬಳಕೆಗೆ ಯೋಗ್ಯವಾಗಿರುತ್ತವೆ. ಅಂತಹ ವಸ್ತುಗಳನ್ನು ಮರುಬಳಕೆ ಮಾಡಿಕೊಳ್ಳಬೇಕು. ಸರ್ಕಾರ, ಸ್ಥಳೀಯ ಸಂಘ-ಸಂಸ್ಥೆಗಳು, ಕೈಗಾರಿಕೆಗಳು, ಖಾಸಗಿ ಸಂಸ್ಥೆಗಳು ತ್ಯಾಜ್ಯವಸ್ತು ನಿರ್ವಹಣಾ ಘಟಕಗಳನ್ನು ಸ್ಥಾಪಿಸಿ ಸೂಕ್ತವಾಗಿ ನಿರ್ವಹಿಸಬೇಕು.

ತ್ಯಾಜ್ಯವಸ್ತುಗಳನ್ನು ಘನ, ದ್ರವ ಎಂದು ವಿಂಗಡಿಸಿ ವಿಲೇವಾರಿ ಮಾಡಬೇಕು. ಸಾಧ್ಯವಾದಲ್ಲಿ ಮರುಬಳಕೆಗೆ ಮೊದಲ ಆದ್ಯತೆ ಕೊಡಬೇಕು. ದೊಡ್ಡದೊಡ್ಡ ನಗರಗಳಲ್ಲಿ ಕಸದ ನಿರ್ವಹಣೆ ದೊಡ್ಡ ಸಮಸ್ಯೆಯಾಗಿದೆ. ಪ್ಲಾಸ್ಟಿಕ್, ಫೈಬರ್, ರಬ್ಬರ್, ಗಾಜು, ಕಬ್ಬಿಣ ಮತ್ತು ಇತರ ಲೋಹದ ತ್ಯಾಜ್ಯವಸ್ತುಗಳನ್ನು ಮರುಬಳಕೆ ಮಾಡಿಕೊಂಡಲ್ಲಿ ಕಸದ ಸಮಸ್ಯೆಯನ್ನು ಸ್ವಲ್ಪ ಕಡಿಮೆ ಮಾಡಬಹುದು. ಇವುಗಳನ್ನು ಬಳಸಿಕೊಂಡು ಅಲಂಕಾರಿಕ ವಸ್ತುಗಳು, ಇತರೆ ಗೃಹಬಳಕೆಯ ವಸ್ತುಗಳನ್ನಾಗಿಯೂ ತಯಾರಿಸಬಹುದು. ಕೆಲವೊಂದು ತ್ಯಾಜ್ಯವಸ್ತುಗಳನ್ನು ಸುಡುವುದರಿಂದ ಹೂಳುವುದರಿಂದ ಕೆಲವು ವಿಷಕಾರಿ ರಾಸಾಯನಿಕ ಅನಿಲಗಳು ಬಿಡುಗಡೆಯಾಗುವುದರಿಂದ ಪರಿಸರ ನಾಶವಾಗುತ್ತದೆ. ಆದ್ದರಿಂದ ಹಾನಿಕಾರಕ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಪರಿಸರಕ್ಕೆ ಮತ್ತು ಜೀವಿಗಳಿಗೆ ಯಾವುದೇ ರೀತಿಯಲ್ಲಿ ಹಾನಿಯಾಗದಂತೆ ನಿರ್ವಹಣೆ ಮಾಡಿದರೆ ಒಳಿತಾಗುತ್ತದೆ.

**ಉಪಸಂಹಾರ** : ಆದ್ದರಿಂದ ಪ್ರತಿಯೊಬ್ಬರಲ್ಲಿ ತ್ಯಾಜ್ಯವಸ್ತುಗಳ ನಿರ್ವಹಣೆಯನ್ನು ಹೇಗೆ ಮಾಡಬೇಕು ಎಂಬುದರ ಅರಿವು ಮೂಡಿಸಬೇಕು. ಅಂದಾಗ ಮಾತ್ರ ನಿರ್ವಹಣೆ ಸುಲಭವಾಗುತ್ತದೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ ಎಂಬಂತೆ ನಮ್ಮಿಂದ ಉಂಟಾಗುವ ತ್ಯಾಜ್ಯವಸ್ತುಗಳನ್ನು ಸೂಕ್ತರೀತಿಯಲ್ಲಿ ಮರುಬಳಕೆ ಮತ್ತು ವಿಲೇವಾರಿ ಮಾಡಿದ್ದಲ್ಲಿ ಪರಿಸರ ಸಂರಕ್ಷಣೆ ಮಾಡುವುದರ ಜೊತೆಗೆ ನಮ್ಮ ಆರೋಗ್ಯ ರಕ್ಷಣೆಯೂ ಮಾಡಿಕೊಂಡಂತಾಗುತ್ತದೆ.

ಶ್ರೀ ಎಸ್.ಕೆ.ಶಿರಶ್ಯಾಡ ಕನ್ನಡ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ